# ಸಾಯಿ ಪಲ್ಲವಿಯ ಸ್ಟೋರಿ



ತೆಲುಗಿನಲ್ಲಿ ಪ್ರಚಾರದ ವಿಷಯದಲ್ಲಿ ಹೀರೊಗಳಿಗೆ ಪೈಪೋಟಿ ಕೊಡುವಲ್ಲಿ ಹೀರೊಯಿನ್‌ಗಳು ಯಾವತ್ತೂ ಹಿಂದೆ ಬಿದ್ದಿಲ್ಲ. ಹದಿಹರೆಯದವರ ಹೊಸ ಸೆನ್ಸೇಷನ್ ಸಾಯಿ ಪಲ್ಲವಿಯನ್ನೇ ನೋಡಿ. 'ಫೋರ್ಬ್ಸ್ ಪ್ರಕಟಿಸಿರುವ 30 ವರ್ಷಕ್ಕಿಂತ ಕೆಳಗಿನ 30 ತಾರೆಯರು' ಪಟ್ಟಿಯಲ್ಲಿ ಸಾಯಿ ಪಲ್ಲವಿ ಸ್ಥಾನ ಪಡೆದಿದ್ದಾಳೆ. ಈ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಏಕೈಕ ನಟಿ ಇವಳು! ಈ ಸುದ್ದಿಯನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿ ಸಂಭ್ರಮಿಸಿಕೊಂಡಿದ್ದಾಳೆ ಸಾಯಿ ಪಲ್ಲವಿ.

ತೆಲುಗು, ಮಲಯಾಳಂ ಮತ್ತು ತಮಿಳಿನಲ್ಲಿ ಭಾರೀ ಬೇಡಿಕೆ ಇರುವ ನಟಿ ಸಾಯಿ. 2015ರಲ್ಲಿ ಮಲಯಾಳಂ ಸಿನಿಮಾ 'ಪ್ರೇಮಂ'ನಲ್ಲಿ ನೀಡಿದ ಅತ್ಯುತ್ತಮ ಅಭಿನಯ ಆಕೆಯನ್ನು ದಿನಬೆಳಗಾಗುವುದರೊಳಗೆ ತಾರೆಯನ್ನಾಗಿಸಿತು. 2017ರಲ್ಲಿ 'ಫಿದಾ' ಚಿತ್ರದ ಮೂಲಕ ತೆಲುಗಿಗೆ ಕಾಲಿಟ್ಟ ಆಕೆ, ಅಲ್ಲೀಗ ಮುಂಚೂಣಿಯ ಹೀರೊಯಿನ್.

ಕಥೆ ವಿಭಿನ್ನವಾಗಿದ್ದರೆ ಮಾತ್ರ ಆ ಚಿತ್ರದಲ್ಲಿ ನಟಿಸುವುದಾಗಿ ಸಾಯಿ ಪ್ರತಿಜ್ಞೆ ಮಾಡಿದ್ದಾಳೆ. 'ಚಿತ್ರಕ್ಕೆ ಕಥೆಯೇ ಜೀವಾಳ. ಸುಮ್ಮನೆ ಕುಣಿಯಲು ಹೀರೊಯಿನ್ ಆಗುವುದಿಲ್ಲ. ಪಾತ್ರಕ್ಕೆ ಆಳ ಅಗಲ ಇದ್ದರೆ ಮಾತ್ರ ನಟಿಸುತ್ತೇನೆ' ಎನ್ನುವುದು ಆಕೆಯ ಸ್ಪಷ್ಟಮಾತು. ಆಕೆಯ ಸಾಮಾಜಿಕ ಕಾಳಜಿಯೂ ಅನನ್ಯವೇ. ಫೇರ್‌ನೆಸ್ ಕ್ರೀಮ್‌ನ ಜಾಹೀರಾತು ಒಂದರಲ್ಲಿ ನಟಿಸಲು ಎರಡು ಕೋಟಿ ರೂಪಾಯಿ ಆಫರ್ ಬಂದಾಗ ಅದನ್ನು ಬಹಿರಂಗವಾಗಿ ತಿರಸ್ಕರಿಸಿದ ಧೈರ್ಯಗಾತಿ ಈಕೆ. 'ಭಾರತೀಯರದ್ದು ಸಹಜ ಸ್ಕಿನ್ ಟೋನ್. ಯಾವುದೋ ಕ್ರೀಮ್ ಕೈಯಲ್ಲಿ ಇಟ್ಟುಕೊಂಡು ಸುಳ್ಳು ಹೇಳಲು ನಾನು ತಯಾರಿಲ್ಲ' ಎನ್ನುವುದು ಆಕೆಯ ಉತ್ತರವಾಗಿತ್ತು.

ಎಂಬಿಬಿಎಸ್ ಪೂರ್ಣಗೊಳಿಸಲು ನಡುವೆ ದೀರ್ಘಕಾಲ ಚಿತ್ರರಂಗದಿಂದ ಹೊರಗಿದ್ದ ಆಕೆ ಮತ್ತೆ ತೆಲುಗಿನಲ್ಲಿ ಒಳ್ಳೆಯ ಆಫರ್‌ಗಳನ್ನು ಪಡೆದಿದ್ದಾಳೆ. ನಾಗಚೈತನ್ಯ ಜೊತೆಗೆ 'ಲವ್ ಸ್ಟೋರಿ' ಮತ್ತು ರಾಣಾ ದಗ್ಗುಬಾಟಿ ಜೊತೆಗೆ 'ವಿರಾಟ ಪರ್ವಂ' ಆಕೆಯ ಸುದ್ದಿ ಮಾಡುತ್ತಿರುವ ಚಿತ್ರಗಳು. ■

## ಸಾರಾ ಸೌಂದರ್ಯ ಮೀಮಾಂಸೆ!



ಸಾಮಾನ್ಯವಾಗಿ ಹೆಣ್ಣುಮಕ್ಕಳು ತಾವು ಬಯಸುವ ಗಂಡು ಸ್ಫುರದ್ರೂಪಿ ಆಗಿರಬೇಕೆಂದು ಬಯಸುವುದು ಸಹಜ. ಅದರಲ್ಲೂ ಸಿನಿಮಾ ನಟಿಯರು ಸೌಂದರ್ಯಕ್ಕೇ ಹೆಚ್ಚು ಪ್ರಾಧಾನ್ಯ ನೀಡುತ್ತಾರೆ. ಆದರೆ ಸಾರಾ ಅಲಿ ಖಾನ್ ಪ್ರಕಾರ, ಗಂಡಸರು ಸ್ಫುರದ್ರೂಪಿ ಆಗಿರುವುದು ಮುಖ್ಯವಲ್ಲ! 'ನಿಲುವು, ಸೌಂದಯ ಅಲ್ಲ; ನಿಷ್ಠೆ ಮುಖ್ಯ' ಎನ್ನುವುದು ಆಕೆಯ ಖಡಕ್ ಉತ್ತರ.

ಕರೀನಾ ಕಪೂರ್ ನಡೆಸುತ್ತಿರುವ ರೇಡಿಯೊ ಷೋನಲ್ಲಿ ಸಾರಾ ಈ ಉತ್ತರವನ್ನು ನೀಡಿದ್ದಾಳೆ. 'ನೀನು ಬಯಸುವ ಗಂಡು ಹೇಗಿರಬೇಕು?' ಎನ್ನುವುದು ಕರೀನಾ ಮುಂದಿಟ್ಟ ಪ್ರಶ್ನೆ. 'ಆತನಿಗೆ ಹಾಸ್ಯಪ್ರಜ್ಞೆ ಇರಬೇಕು. ಅದಕ್ಕಿಂತ ಮುಖ್ಯವಾಗಿ ನಿಷ್ಠೆ ಇರಬೇಕು' ಎನ್ನುವುದು ಸಾರಾ ಉತ್ತರ. 'ಸುಂದರವಾಗಿರಬೇಕು ಎಂದು ಅನ್ನಿಸುವುದಿಲ್ಲವೆ?' ಎಂದು ಕರೀನಾ ಅಚ್ಚರಿಯಿಂದ ಮರುಪ್ರಶ್ನೆ ಹಾಕಿದಾಗ, 'ಅದೇನೂ ಅಷ್ಟು ಮುಖ್ಯವಾದದ್ದಲ್ಲ. ತೀರಾ ಸುಂದರಾಂಗ ಆಗಿರಬೇಕಿಲ್ಲ. ಸಾಧಾರಣ ಕಪ್ಪು ಇದ್ದರೂ ನಡೆಯುತ್ತದೆ' ಎಂದಿದ್ದಾಳೆ ಸಾರಾ.

ಕಾರ್ತಿಕ್ ಆರ್ಯನ್ ಜೊತೆಗೆ ಒಂದೊಮ್ಮೆ ತೆಕ್ಕೆಬಿದ್ದು ಓಡಾಡುತ್ತಿದ್ದ ಸಾರಾ, ಈಗ ಆತನ ಗೆಳೆತನವನ್ನು ಕಡಿದುಕೊಂಡಿದ್ದಾಳೆ. ಆತ ನನಗೆ ಒಳ್ಳೆಯ ಫ್ರೆಂಡ್ ಆಗಿದ್ದ. ಅವನ ಜೊತೆಗೆ ಪ್ರೀತಿ ಪ್ರೇಮ ಏನೂ ಇರಲಿಲ್ಲ ಎಂದು ಆಕೆ ಸ್ಪಷ್ಟನೆ ಕೊಟ್ಟು ತಿಂಗಳುಗಳೇ ಉರುಳಿವೆ. ಈಗ ಆಕೆಯದ್ದು ಏನಿದ್ದರೂ ವೃತ್ತಿಜೀವನದ ಕಡೆಗಿನ ಗಮನವಂತೆ.

■ ಹನಿ